## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಾಸನದಲ್ಲಿ ಗ್ರೀನ್‌ಫೀಲ್ಡ್ ದೇಶಿಯ ಪ್ರಯಾಣಿಕ ವಿಮಾನ ನಿಲ್ದಾಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:1) ಸರ್ಕಾರದ ಆದೇಶ ಸಂಖ್ಯೆ: ಮೂಅಇ 47 ರಾಅವಿ 2018, ದಿನಾಂಕ 25/06/2021

2) ವಿಶೇಷ ಜಿಲ್ಲಾಧಿಕಾರಿ ಕೆಐಎಡಿಬಿ ಇವರ ಪತ್ರ ಸಂಖ್ಯೆ: ಕೆಐಎಡಿಬಿ/ಕೇಂಕ/ಭೂಸ್ವಾ-ಮೈ/1208-ಭೂಪ/2021-22/4129, ದಿನಾಂಕ 13/07/2021

3) ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಐಐಡಿಸಿ ಇವರ ಪತ್ರ ಸಂಖ್ಯೆ ಐಪಿಡಿ/388/1022/2021-22, ದಿನಾಂಕ 22/09/2021

4) ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 22 ಐಡಿಎಂ 2020, ದಿನಾಂಕ 15/04/2021

------------

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 25/06/2021 ರ ಸರ್ಕಾರದ ಆದೇಶದಲ್ಲಿ ಹಾಸನ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾಗಿರುವ ಕ್ರಮದ ವಿವರಗಳ ಸಂಬಂಧ ಸೂಕ್ತ ಆದೇಶವನ್ನು ಹೊರಡಿಸಲಾಗಿದ್ದು, ಸದರಿ ಆದೇಶದ ಕ್ರಮ ಸಂಖ್ಯೆ (6) ರಲ್ಲಿ ಈ ಕೆಳಕಂಡಂತೆ ಸೂಚಿಸಲಾಗಿದೆ.

"6. ನಿಲ್ದಾಣದ ಎರಡನೇ ಹಂತದ ಅಭಿವೃದ್ಧಿಯ ಸಮಯದಲ್ಲಿ ರನ್‌ವೇ ವಿಸ್ತರಣೆಗಾಗಿ (2200 ಮೀ ನಿಂದ 3300 ಮೀ ವರೆಗೆ) ರೂ.13.20 ಕೋಟಿ ವೆಚ್ಚದಲ್ಲಿ ಕೆಐಎಡಿಬಿ ಮೂಲಕ ಸುಮಾರು 24 ಎಕರೆ 23 ಗುಂಟಾ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು (219.05 ಎಕರೆ ಭೂಮಿಗೆ ಕೆಐಎಡಿಬಿಯು ಹೊರಡಿಸಿರುವ ಅಂತಿಮ ಅಧಿಸೂಚನೆಯಲ್ಲಿನ 19.06 ಎಕರೆ ಜಮೀನು ಹಾಗೂ 5.17ಎಕರೆ ಪ್ರದೇಶಕ್ಕೆ "ಮಾತ್ರ" ಹೊಸದಾಗಿ ಭೂಸ್ವಾಧೀನ ಹೀಗೆ ಒಟ್ಟಾರೆ 24.23ಎಕರೆ ) ಮತ್ತು ಲೆಕ್ಕ ಶೀರ್ಷಿಕೆ "5465-01-190-1-05-132 - ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ -ಬಂಡವಾಳ ವೆಚ್ಚಗಳ" ಅಡಿಯಿಂದ ರೂ.13.20 ಕೋಟಿಗಳನ್ನು ಕೆಐಎಡಿಬಿ ಇವರಿಗೆ ಬಿಡುಗಡೆ ಮಾಡಲು ಅನುಮೋದನೆ."

2) ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಕೆಐಎಡಿಬಿ ಇವರ ಪತ್ರದಲ್ಲಿ ಹಾಸನ ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ (ಫೇಸ್-2) ಗಾಗಿ ಹೆಚ್ಚುವರಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಸ್ತಾಪಿತ ಯೋಜನೆಗೆ ಒಟ್ಟು 24 ಎಕರೆ 23 ಗುಂಟೆ ಜಮೀನು ಅವಶ್ಯಕವಾಗಿರುತ್ತದೆ. ಈ ಪೈಕಿ ಕೆಲವು ಸರ್ವೆ ಸಂಖ್ಯೆಗಳಲ್ಲಿನ ಒಟ್ಟು 19 ಎಕರೆ 6 ಗುಂಟೆಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಉಳಿದ 5-17 ಎಕರೆ ಜಮೀನನ್ನು ಹೊಸದಾಗಿ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ. ಸದರಿ ಪ್ರಕ್ರಿಯೆಯನ್ನು ಮುಂದುವರೆಸುವ ಬಗ್ಗೆ ಮತ್ತು ಸದರಿ ಭೂಸ್ವಾಧೀನ ವೆಚ್ಚವನ್ನು ಮಂಡಳಿಯಲ್ಲಿ ಠೇವಣಿ ಮಾಡುವ ಬಗ್ಗೆ ಅನುಮೋದನೆ / ಅಭಿಪ್ರಾಯವನ್ನು ಕೋರಿರುತ್ತಾರೆ.

3) ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಕೆಎಸ್‌ಐಐಡಿಸಿ ಇವರು ನೀಡಿರುವ ವರದಿಯಲ್ಲಿ ಕೆಐಎಡಿಬಿ ಇವರು ಕೋರಿರುವಂತೆ ಹಾಸನ ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ (ಪೇಸ್-2) ಗಾಗಿ ಅವಶ್ಯವಿರುವ 24 ಎಕರೆ 23 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ರೂ.13.20 ಕೋಟಿ ಬಿಡುಗಡೆಗೊಳಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

4) ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ 2021-22ನೇ ಆರ್ಥಿಕ ಸಾಲಿಗೆ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಮುಂದುವರೆದ ಯೋಜನೆಗಳನ್ನು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅನುಮೋದನೆಯನ್ನು ನೀಡಿ ಆದೇಶಿಸಲಾಗಿದೆ. ಇದರಲ್ಲಿ ಲೆಕ್ಕಶೀರ್ಷಿಕೆ 5465-01-190-1-05-132- ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ - ಬಂಡವಾಳ ವೆಚ್ಚಗಳು ಅಡಿ ಒದಗಿಸಿರುವ ಹಾಗೂ ಇದುವರೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ವಿವರ | ವೆಚ್ಚ (ರೂ ಲಕ್ಷಗಳಲ್ಲಿ) | ಶಿಲ್ಕು (ರೂ ಲಕ್ಷಗಳಲ್ಲಿ) |
|---|---|---|---|
| | ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 22 ಐಡಿಎಂ 2020, ದಿನಾಂಕ 15/04/2021ರಲ್ಲಿ ಹಂಚಿಕೆ ಮಾಡಿರುವ ಅನುದಾನ | | 25000.00 |
| 1 | ಸರ್ಕಾರದ ಆದೇಶ ಸಂಖ್ಯೆ ಐಡಿಡಿ 60 ಡಿಐಎ 2018, ದಿನಾಂಕ 26/04/2021 (ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿಗೆ) | 5000.00 | 20000.00 |
| 2 | ಸರ್ಕಾರದ ಆದೇಶ ಸಂಖ್ಯೆ ಐಡಿಡಿ 01 ಡಿಐಎ 2019, ದಿನಾಂಕ 25/05/2021 (ವಿಜಯಪುರ ವಿಮಾನ ನಿಲ್ದಾಣದ ಮೊದಲನೇ ಹಂತದ ಕಾಮಗಾರಿಗಳಿಗೆ ) | 2500.00 | 17500.00 |
| 3 | ಸರ್ಕಾರದ ಆದೇಶ ಸಂಖ್ಯೆ ಐಡಿಡಿ 60 ಡಿಐಎ 2018, ದಿನಾಂಕ 11/06/2021 (ಶಿವಮೊಗ್ಗ ವಿಮಾನ ನಿಲ್ದಾಣದ ಭೂಸ್ವಾಧಿನ ಪರಿಹಾರಧನ ಬಿಡುಗಡೆಗೆ) | 806.62 | 16693.38 |
| 4 | ಸರ್ಕಾರದ ಆದೇಶ ಸಂಖ್ಯೆ ಐಡಿಡಿ 86 ಡಿಐಎ 2019, ದಿನಾಂಕ 14/7/2021 ( ಬೆಳಗಾವಿ ಸಾಂಬ್ರಾ ವಿಮಾನ ನಿಲ್ದಾಣದ ಭೂಸ್ವಾಧೀನ ಪ್ರಕರಣಕ್ಕೆ ಪರಿಹಾರ ಧನವನ್ನು ನ್ಯಾಯಾಲಯದಲ್ಲಿ ಠೇವಣಿ ಇರಿಸುವ ಬಗ್ಗೆ ) | 126.51 | 16566.87 |
| 5 | ಸರ್ಕಾರದ ಆದೇಶ ಸಂಖ್ಯೆ ಐಡಿಡಿ 86 ಡಿಐಎ 2019, ದಿನಾಂಕ 29/9/2021 (ಬೆಳಗಾವಿ ಸಾಂಬ್ರಾ ವಿಮಾನ ನಿಲ್ದಾಣದ ಭೂಸ್ವಾಧೀನ ಪ್ರಕರಣಕ್ಕೆ ಪರಿಹಾರ ಧನವನ್ನು ನ್ಯಾಯಾಲಯದಲ್ಲಿ ಠೇವಣಿ ಇರಿಸುವ ಬಗ್ಗೆ ) | 156.35 | 16410.52 |
| 6 | ಸರ್ಕಾರದ ಆದೇಶ ಸಂಖ್ಯೆ ಐಡಿಡಿ 01 ಡಿಐಎ 2019, ದಿನಾಂಕ 26/11/2021 (ವಿಜಯಪುರ ವಿಮಾನ ನಿಲ್ದಾಣದ ಮೊದಲನೇ ಹಂತದ ಕಾಮಗಾರಿಗಳಿಗೆ ) | 3910.00 | 12500.52 |
| 7 | ಸರ್ಕಾರದ ಆದೇಶ ಸಂಖ್ಯೆ ಐಡಿಡಿ 105 ಡಿಐಎ | 880.00 | 11620.52 |

| ಕ್ರ.ಸಂ | ವಿವರ | ವೆಚ್ಚ (ರೂ ಲಕ್ಷಗಳಲ್ಲಿ) | ಶಿಲ್ಕು (ರೂ ಲಕ್ಷಗಳಲ್ಲಿ) |
|---|---|---|---|
| | 2019, ದಿನಾಂಕ 29/11/2021 (ಕಲಬುರಗಿ ವಿಮಾನ ನಿಲ್ದಾಣದ ಬಾಕಿ ಮೊತ್ತ) | | |
| | ಒಟ್ಟು | 13379.48 | |

5) ಅದರಂತೆ, ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮೂಅಇ 90 ರಾಅವಿ 2020**

**ಬೆಂಗಳೂರು, ದಿನಾಂಕ 30ನೇ ಡಿಸೆಂಬರ್ 2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾಸನ ವಿಮಾನ ನಿಲ್ದಾಣದ 2ನೇ ಹಂತದ ಅಭಿವೃದ್ಧಿಯ ರನ್‌ವೇ ವಿಸ್ತರಣೆಗಾಗಿ (2200 ಮೀ. ನಿಂದ 3300 ಮೀ. ವರೆಗೆ) ಅವಶ್ಯವಿರುವ 24 ಎಕರೆ 23 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ರೂ.13.20 ಕೋಟಿಗಳ ( ಹದಿಮೂರು ಕೋಟಿ 20 ಲಕ್ಷಗಳು ಮಾತ್ರ) ಅನುದಾನವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

2) ಷರತ್ತುಗಳು:

- ಈಗ ಬಿಡುಗಡೆ ಮಾಡಿರುವ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಕೆ ಮಾಡತಕ್ಕದ್ದು. ಹಾಗೂ ಇದೇ ಉದ್ದೇಶಕ್ಕೆ ಈಗಾಗಲೇ ವೆಚ್ಚ ಮಾಡಿದ್ದಲ್ಲಿ ಈಗ ಬಿಡುಗಡೆ ಮಾಡಿರುವ ಅನುದಾನವನ್ನು ಬಳಕೆ ಮಾಡುವಂತಿಲ್ಲ.

- ಬಿಡುಗಡೆ ಮಾಡಿರುವ ಅನುದಾನವನ್ನು ಹಾಸನ ವಿಮಾನ ನಿಲ್ದಾಣದ ಎರಡನೇ ಹಂತದ ಅಭಿವೃದ್ಧಿಯ ಸಮಯದಲ್ಲಿ ರನ್-ವೇ ವಿಸ್ತರಣೆಗಾಗಿ ಕೆಐಎಡಿಬಿಯು ಹೊರಡಿಸಿರುವ ಅಂತಿಮ ಅಧಿಸೂಚನೆಯಲ್ಲಿನ 19.06 ಎಕರೆ ಜಮೀನು ಹಾಗೂ 5.17ಎಕರೆ ಪ್ರದೇಶಕ್ಕೆ "ಮಾತ್ರ" ಹೊಸದಾಗಿ ಭೂಸ್ವಾಧೀನ ಹೀಗೆ ಒಟ್ಟಾರೆ .24.23 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಮಾತ್ರ ಬಳಕೆ ಮಾಡತಕ್ಕದ್ದು.

- ಅನುದಾನ ಬಳಕೆ ಬಗ್ಗೆ ನಿಗಧಿತ ನಮೂನೆಯಲ್ಲಿ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

3) ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "5465-01-190-1-05-132" ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ-ಬಂಡವಾಳ ವೆಚ್ಚಗಳು" ರಡಿ 2021-22ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

4) ಈ ಮೊತ್ತವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ ಬೆಂಗಳೂರು ಇವರು ಪೇಯಿಜಸ್ ರಸೀದಿಯ ಮೂಲಕ ಸರ್ಕಾರದ ಅಧೀನ

ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ಸೆಳೆಯಲು ಅನುಮತಿಸಿದೆ.

5) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 205 ವೆಚ್ಚ-1/2021, ದಿನಾಂಕ 14/06/2021ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು
ಜಲಸಾರಿಗೆ ಇಲಾಖೆ

ಗೆ:

1. ಮಹಾಲೇಖಪಾಲರು (ಜಿ & ಎಸ್.ಎಸ್.ಎ)/(ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು- 560 001
3. ಜಿಲ್ಲಾಧಿಕಾರಿ, ಹಾಸನ ಜಿಲ್ಲೆ,ಹಾಸನ.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ನಿಗಮತಿ ನಿಯಮಿತ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
8. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1,) ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
12. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
13. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
14. ಸರ್ಕಾರದ ಉಪ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ, ಸಮನ್ವಯ,ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
16. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು